

ಅರುಣ ಪಿ. ಭಟ್ಟ

## ವಾರ ಭವಿಷ್ಯ: 1–8–2019ರಿಂದ 7–8–2019ರವರೆಗೆ.



**ಮೇಷ**

ಕಚೇರಿ ಕೆಲಸ ಪ್ರಯತ್ನದಿಂದ ಶುಭ. ಚಿಕ್ಕ ಪ್ರವಾಸ, ಮನೆಯಲ್ಲಿ ಗೊಂದಲ ಪ್ರವೃತ್ತಿ, ಬೇಡದ ವ್ಯಕ್ತಿಗಳ ಆಗಮನ. ತಾಯಿಯ ಆರೋಗ್ಯ ವ್ಯತ್ಯಾಸ. ಸೇವಕರಿಂದ ಹರ್ಷ. ದಿನಾಂಕ 3 ರಂದು ಮನಸಂತೋಷಕರ ಘಟನೆ.

ಶುಭದಿನ: 3. ದೇವ್ಯಪರಾದ ಕ್ಷಮಾಪನ ಸ್ತೊತ್ರ 12 ಸಾರೆ ಪಠಣ ಮಾಡಿ.



**ವೃಷಭ**

ಆಕಾಂಕ್ಷೆ ಪೂರ್ಣವಾಗಲು ವೇದಿಕೆ ಸಿದ್ಧವಾಗುವುದು ಕುಟುಂಬಸ್ಥರೊಡನೆ ಪ್ರವಾಸ, ಕ್ಷೇತ್ರದರ್ಶನ. ಅರ್ಧಕ್ಕೆ ನಿಂತ ಮನೆಕೆಲಸಕ್ಕೆ ಚಾಲನೆ ದೊರೆಯುವುದು. ಸಹೋದರರ ಸಹಾಯ. ಅನಾರೋಗ್ಯ ಸಂಭವ. ಲೇಖನಿ ಕೆಲಸದಲ್ಲಿ ಪ್ರಗತಿ.

ಶುಭದಿನ: 6. ವೆಂಕಟೇಶ್ವರ ಪ್ರಾರ್ಥನೆ ಮಾಡಿರಿ.



**ಮಿಥುನ**

ಸಮಸ್ಯೆಗಳ ಸರಮಾಲೆಯಲ್ಲಿ ವಾರ ಕಳೆಯುವುದು ಸ್ಪರ್ಧೆಯಲ್ಲಿ ಅಪಜಯ. ವಿನಾಕಾರಣ ಭಯದ ವಾತಾವರಣ. ಆದರೆ ಕೌಟುಂಬಿಕ ಸೌಖ್ಯ ಚೆನ್ನಾಗಿರುವುದು ಕ್ರಯ ವಿಕ್ರಯಗಳಲ್ಲಿ ಒಳ್ಳೆ ಲಾಭ ಕೋರ್ಟ್ ಪ್ರಕರಣಗಳನ್ನು ಮುಂದೂಡಿರಿ.

ಶುಭದಿನ: 6 ನವನಾಗನಾಮ ಸ್ತೋತ್ರ 18 ಸಾರೆ ಪಠಿಸಿರಿ.



**ಕಟಕ**

ವಾರವಿಡಿ ಶುಕ್ರನು ಏರಿಕೆ ಕ್ರಮದಲ್ಲಿ ಶುಭನೀಡುವನು. ದಿನಾಂಕ 3ರಿಂದ ಜನ್ಮದಲ್ಲಿ ಬುಧ ಶುಕ್ರ ಯುತಿ ಇದೆ. ಉತ್ತಮ ಆರೋಗ್ಯ. ಅನಿರೀಕ್ಷಿತವಾಗಿ ಭಾಗ್ಯದ ಬಾಗಿಲು ತೆರೆಯುವುದು. ಶುಭ ಸಂದೇಶ. ವಾರದ ಪ್ರಾರಂಭದಲ್ಲಿ ಅಕಸ್ಮಾತ್ ಖರ್ಚು.

ಶುಭದಿನ: 2. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.



**ಸಿಂಹ**

ಖರ್ಚು ನಿರಾಶೆಯ ಪ್ರಸಂಗಗಳು ಮುಂದುವರೆಯುವುದು. ಬರುವ ಲಾಭ ಅರ್ಧದಲ್ಲಿ ತಡೆಯುವುದು. ಸ್ನೇಹಿತರಿಗೆ ಶುಭಕಾರ್ಯಕ್ಕೆ ಸಹಾಯ ಮಾಡುವಿರಿ. ಮಾನಸಿಕ ಗೊಂದಲ. ಹೊಟ್ಟೆನೋವಿನ ಉಪದ್ರವ. ಅಧಿಕಾರ ಪ್ರಾಪ್ತಿಗೆ ತೊಡಕು.

ಶುಭದಿನ: 5. ಮಾರುತಿ ಉಪಾಸನೆ ಹನುಮಾನ್ ಕವಚ ಪಠಿಸಿರಿ.



**ಕನ್ಯಾ**

ಶ್ರಮವಿಲ್ಲದೆ ಕೆಲಸಗಳು ನಡೆಯುತ್ತವೆ. ಮಧ್ಯಸ್ಥಿಕೆದಾರರಿಂದ ವಿವಾಹದ ಬಗ್ಗೆ ಶುಭಸುದ್ದಿ ದೊರಕುವದು. ಹಳೆಯ ಆಪ್ತರು ಹತ್ತಿರವಾಗುವರು. ವ್ಯಾಪಾರದಲ್ಲಿ ಲಾಭ. ವಾಹನ ಸೌಖ್ಯ. ವಾರಾಂತ್ಯದಲ್ಲಿ ಪ್ರವಾಸದಲ್ಲಿ ತೊಂದರೆ.

ಶುಭದಿನ: 5. ಗಣಪತಿಗೆ 108 ದೂರ್ವಾರ್ಚನೆ ಮಾಡಿರಿ.



**ತುಲಾ**

ಈ ತಿಂಗಳ ಶುಭರಾಶಿ. ದಶಮದ ಬುಧ, ಶುಕ್ರ, ಯುತಿಯಿಂದ ಅಧಿಕಾರ ಪ್ರಾಪ್ತಿ. ಸರ್ಕಾರದಿಂದ ಆರ್ಥಿಕ ಲಾಭ ಮತ್ತು ಮನ್ನಣೆ. ಗಂಡ ಯಾ ಹೆಂಡತಿಗೆ ಪ್ರಗತಿ. ಹೊಸ ಉದ್ಯೋಗ ಶುರುಮಾಡಲು ಸಕಾಲ.

ಶುಭ ದಿನ: 3. ನವಗ್ರಹ ಸ್ತೊತ್ರ ಪಠಣ ಮಾಡಿರಿ.



**ವೃಶ್ಚಿಕ**

ಸಾಡೆಸಾತಿ ಇದ್ದರೂ ಯಶಸ್ಸು ಪಡೆಯುವಿರಿ. ಅರ್ಹರಿಗೆ ವಿದೇಶ ಪ್ರವಾಸ ಯೋಗಪ್ರಾಪ್ತಿ. ಸ್ತ್ರೀ ಮೂಲಕ ಅರ್ಧಲಾಭ. ನೌಕರದಾರರಿಗೆ ಕೆಲಸದಲ್ಲಿ ಸ್ಥಿರತೆ. ದೇವತಾರ್ಚನೆ. ಕೌಟುಂಬಿಕ ಕಲಹದಿಂದ ನೋವು.

ಶುಭದಿನ: 4. ಗೌರಿಪೂಜೆ ಗೋಪೂಜೆ ಮಾಡಿರಿ.



**ಧನಸ್ಸು**

ಖಂಡಿತ ತೊಂದರೆಯಲ್ಲಿ ಸಿಲುಕಿದ ರಾಶಿ. ಹೊಯ್ದಾಡುವ ಮನಸ್ಸು. ಹೆಂಡತಿಗೆ ಅನಾರೋಗ್ಯದಿಂದ ಖರ್ಚು. ಕೆಲಸದಲ್ಲಿ ಅಪವಾದ ಭಯ. ನೀರಿನಿಂದ ಕಂಟಕ ಅಧಿಕಾರ ಭಂಗ ಪ್ರಸಂಗ. ನಿರೀಕ್ಷಿತ ಫಲ ಪ್ರಾಪ್ತಿ.

ಶುಭದಿನ: 7. ಸದ್ಗುರು ಆರಾಧನೆ ಮಾಡಿ.



**ಮಕರ**

ಅತ್ಯುತ್ತಮ ಶುಭ ಘಟನೆಗಳೊಡನೆ ಆಪತ್ತನ್ನು ಎದುರಿಸುವಿರಿ. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತಮ ಯಶ ಪ್ರಾಪ್ತಿ. ಹೊಸವಸ್ತು ಖರೀದಿ. ಗೃಹಿಣಿಯರ ಆಭರಣ ಖರೀದಿ. ಕ್ರೀಡಾಪಟುಗಳಿಗೆ ಸನ್ಮಾನದ ಹೊದಿಕೆ.

ಶುಭದಿನ: 4. ಗಣಪತಿ ಆರಾಧನೆ ಮಾಡಿರಿ ಜಗದಂಬೆಯನ್ನು ಪ್ರಾರ್ಥಿಸಿ.



**ಕುಂಭ**

ಬಹು ದಿನದ ಕೋರ್ಟ್ ಪ್ರಕರಣ ಮುಗಿಯುತ್ತದೆ. ಶತ್ರುನಿಗ್ರಹ. ಆರೋಗ್ಯ ಸುಧಾರಣೆ. ಕೆಲಸದಲ್ಲಿ ಬಡ್ತಿ ಮತ್ತು ವರ್ಗಾವಣೆ ಸಂಭವ. ವ್ಯವಸಾಯಿಕ ಉತ್ತಮ ಲಾಭ. ಶೈಕ್ಷಣಿಕ ಕ್ಷೇತ್ರದವರಿಗೆ ಕೊಂಚ ನಿರಾಳ.

ಶುಭದಿನ: 4. ಲಕ್ಷ್ಮೀನರಸಿಂಹ ಕ್ಷೇತ್ರ ದರ್ಶನ ಮಾಡಿರಿ.



**ಮೀನ**

ಕ್ರೀಡಾಪಟುಗಳಿಗೆ ಉತ್ತಮ ಯಶ. ಶೇರು ವ್ಯವಹಾರದಾರರಿಗೆ ಅನಿರೀಕ್ಷಿತ ಲಾಭ. ಮಕ್ಕಳಿಂದ ಯಶಸ್ಸು ಸ್ಥಾನಮಾನ ಪ್ರಾಪ್ತಿ. ಮನೆ ವಿಷಯಕ್ಕೆ ಇರುವ ಅಡ್ಡಿ ನಿವಾರಣೆ. ದೂರಪ್ರವಾಸಕ್ಕೆ ಸೂಕ್ತಕಾಲ ಲೇಖಕರಿಗೆ ಪ್ರಶಸ್ತಿ ಗೌರವ.

ಶುಭದಿನ: 2. ಆದಿತ್ಯ ಹೃದಯ ಸ್ತೋತ್ರ 21 ಸಾರಿ ಪಠಿಸಿ.


DHEEPAM
LAMP OIL
BLEND OF 5 OILS
ದೀಪದ ಬೆಳಕಲ್ಲಿ
ಒಂದು ದೈವೀಕ
ಅನುಭವ
ಸುಗಂಧ ಸುವಾಸನೆ
ಹರಡುವ ಪಂಚ ದೀಪ ಎಣ್ಣೆ
